


ಸೃಜನ್

# ಮನುಷ್ಯರೆದೆಯ ಮೀಟಬಾರದ ತಂತಿಗಳನ್ನು...




**'ಅವರು'**
ಮನುಷ್ಯರೆದೆಯ ಮೀಟಬಾರದ ತಂತಿಗಳನ್ನು
ಮೀಟುತ್ತಿದ್ದಾರೆ!
ಶ್ರುತಿ ಲಯಗಳೇ ಮುಗ್ಗರಿಸಿದ ವಿಲಯನಾದಕ್ಕೆ
ತಾಂಡವಿಸುತ್ತಿದ್ದಾರೆ – ಕಾಲವ ಕಾಲವಾಗುವಂತೆ
ಹೂತ ಸತ್ಯಗಳೊಂದಿಗೆ ಕನಸುಗಳೂ ಕಾಲಗತವಾಗುವಂತೆ
ಚಿಗುರು ಜೀವಗಳುರುಳಿ ಕೊಳೆತು ಗೊಬ್ಬರವಾಗಿ
ಗೊಬ್ಬರವೇ ಪವಿತ್ರ ಖಾದ್ಯದ ಭ್ರಮೆಯಾಗುವಂತೆ
ಗಾಳಿಯೂ ತನ್ನ ಪಾಳಿ ಬದಲಿಸಿದೆ – ನೀರು
ಕಣ್ಣೀರನ್ನೇ ಗಟಗಟಿಸಿದರೂ ರವರವ ದಾಹವಿಂಗುತ್ತಿಲ್ಲ!
ಮಣ್ಣ ಇತಿಹಾಸ ಪುರಾಣವಾಗಿ – ಪುರಾಣವೂ ಹೈರಾಣವಾಗಿ
ತರ್ಕ ತುಕ್ಕುಗಟ್ಟಿ ಗುಜರಿಯ ಗೋರಿ ಸೇರಿದೆ
ಅಮಲಿನೋತ್ಕಟದ ಮಲಿನತೆಗಂಜಿದೆ
'ಪರ'ದ ಧರ್ಮ
'ಇಹ'ದ ಸರ್ವಾಧಿಕಾರೀ ಉಸ್ತುವಾರಿ ಹೊತ್ತಿದೆ
ಅವಧಿ ಮೀರಿದ ಧರ್ಮದೌಷಧಿಯ ನಂಜು
ಅಮೃತವನಣಕಿಸುತ್ತಿದೆ
ಜಗತ್ ಸತ್ಯ ಬ್ರಹ್ಮಮಿಥ್ಯವಾಗಿ ತತ್ತ್ವವಿಡೀ ಉಲ್ಟಾ ಹೊಡೆದಿದೆ!
ನಿಘಂಟಿನಲ್ಲಿ ನಿರುಮ್ಮಳ ನಿದ್ರಿಸುತ್ತಿರುವ
'ಸತ್ಯಾಗ್ರಹ'ದ ಮೇಲೂ ಹಿಂಸಾಚೋದನೆಯ ಮೊಕದ್ದಮೆ!